ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

4

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಕಲಾಪಗಳು

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 3/9/2020

ಸದನದಲ್ಲಿ ಸಂವಿಧಾನ: ಬರುತ್ತಿದೆ ಪುಸ್ತಕ

ಮುಂಬರುವ ಅಧಿವೇಶನ ಸಂದರ್ಭದಲ್ಲಿ ಬಿಡುಗಡೆ ಸಾಧ್ಯತೆ

■ ಶಂಕರ ಪಾಗೋಜಿ

ಉವಾ 3/9/20

ಬೆಂಗಳೂರು: ಸಂವಿಧಾನ ರಚನೆಯಾದ ನಂತರ ರಾಜ್ಯ ವಿಧಾನ ಸಭೆಯಲ್ಲಿ ಸಂವಿಧಾನದ ಕುರಿತು ವಿಶೇಷ ಚರ್ಚೆ ನಡೆಸುವ ಮೂಲಕ ದೇಶದ ಇತಿಹಾಸದಲ್ಲಿ ಹೊಸ ಅಧ್ಯಾಯಕ್ಕೆ ನಾಂದಿ ಹಾಡಿದ್ದ ರಾಜ್ಯ ವಿಧಾನಸಭೆ ಅಧ್ಯಕ್ಷರು ಸಂವಿಧಾನದ ಕುರಿತು ನಡೆದ ಚರ್ಚೆಯ ಸಂಗ್ರಹವನ್ನೇ ಪುಸ್ತಕವನ್ನಾಗಿ ಹೊರ ತರಲು ಮುಂದಾಗಿದ್ದಾರೆ.

ಈ ವರ್ಷದ ಮಾರ್ಚ್ ತಿಂಗಳಿನಲ್ಲಿ ನಡೆದ ಅಧಿವೇಶನದಲ್ಲಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಸಂವಿಧಾನದ ಕುರಿತು ಸದನದಲ್ಲಿ ಒಂದು ದಿನದ ವಿಶೇಷ ಚರ್ಚೆ ನಡೆಸಲು ತೀರ್ಮಾನಿಸಿ ಸಂವಿಧಾನದ ಕುರಿತು ಮಾತನಾಡಲು ಎಲ್ಲರಿಗೂ ಅವಕಾಶ ಕಲ್ಪಿಸಿದ್ದರು.

ಆಗ ಸಂವಿಧಾನದ ಕುರಿತು ಶಾಸಕರು ವ್ಯಕ್ತಪಡಿಸಿದ್ದ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಪುಸ್ತಕ ರೂಪದಲ್ಲಿ ಹೊರ ತರಲು ನಿರ್ಧರಿಸಿದ್ದು ಸಂವಿಧಾನದ ಕುರಿತು ನಡೆದ ಚರ್ಚೆಯಲ್ಲಿ 47 ಸದಸ್ಯರು ಪಾಲ್ಗೊಂಡಿದ್ದರು. ಸುಮಾರು 8 ದಿನ ಸಂವಿಧಾನದ ಕುರಿತಂತೆ ವಿಶೇಷ ಚರ್ಚೆ ನಡೆಸಲಾಗಿತ್ತು. ಒಟ್ಟು 27 ಗಂಟೆ 46 ನಿಮಿಷ ಚರ್ಚೆ ನಡೆಸಲಾಗಿತ್ತು. ಸದನದಲ್ಲಿ ಸದಸ್ಯರು ವ್ಯಕ್ತಪಡಿಸಿರುವ ಅಭಿಪ್ರಾಯಗಳಲ್ಲಿನ ಸಣ್ಣಪುಟ್ಟ ವ್ಯತ್ಯಾಸಗಳನ್ನು [illegible] 200 [illegible] ಸಿದ್ಧಪಡಿಸಲಾಗಿದ್ದು ಈಗಾಗಲೇ ಪುಸ್ತಕ ಪ್ರಕಟಣೆಗೆ ಸಿದ್ಧಗೊಂಡಿದೆ. ಮುಂಬರುವ ಅಧಿವೇಶನದ ಸಂದರ್ಭದಲ್ಲಿ ಪುಸ್ತಕವನ್ನು ಬಿಡುಗಡೆ ಮಾಡಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಎಲ್ಲ ಪಕ್ಷಗಳ ಶಾಸಕರು ಸಂವಿಧಾನದ ಕುರಿತು ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರಿಂದ ಅದು ಪುಸ್ತಕ ರೂಪದಲ್ಲಿ ಹೊರ ತಂದರೆ, ಸಂವಿಧಾನದ ಕುರಿತು ಅಧ್ಯಯನ ಮಾಡುವವರಿಗೆ, ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿಯಾಗಲಿದೆ ಎನ್ನುವ ಉದ್ದೇಶವನ್ನು ಸ್ಪೀಕರ್ ಹೊಂದಿದ್ದಾರೆ.

ಲೋಕಸಭೆ ಸ್ಪೀಕರ್‌ಗೂ ವರದಿ?: ರಾಜ್ಯ ವಿಧಾನಸಭೆಯಲ್ಲಿ ಸಂವಿಧಾನದ ಕುರಿತು ನಡೆದ ವಿಸ್ತೃತ ಚರ್ಚೆಯ ಬಗ್ಗೆ ಲೋಕಸಭೆ ಸಭಾಧ್ಯಕ್ಷರಿಗೂ ವರದಿ ನೀಡಲು ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ನಿರ್ಧರಿಸಿದ್ದಾರೆ ಎಂದು ತಿಳಿದು ಬಂದಿದೆ. ಸಂವಿಧಾನದ ಬಗ್ಗೆ ಮುಕ್ತವಾಗಿ ಚರ್ಚೆ ಮಾಡಿರುವುದರಿಂದ ಇದು ಸಂಸತ್ತು ಹಾಗೂ ಇತರ ವಿಧಾನಸಭೆಗಳಲ್ಲಿಯೂ ಚರ್ಚೆಯಾಗಲು ಪ್ರೇರಣೆಯಾಗಲಿ ಎಂಬ ಉದ್ದೇಶದಿಂದ ಸಭಾಧ್ಯಕ್ಷರು ಲೋಕಸಭಾ ಸ್ಪೀಕರ್‌ಗೂ ವರದಿ ಕೊಡುವ ಬಗ್ಗೆ ಆಲೋಚಿಸಿದ್ದಾರೆ ಎಂದು ಹೇಳಲಾಗುತ್ತಿದೆ.

ಶಾಸಕರ ಭಿನ್ನ ಅಭಿಪ್ರಾಯಗಳು: ಸಂವಿಧಾನದ ಕುರಿತು ಕಾಂಗ್ರೆಸ್, ಜೆಡಿಎಸ್ ಹಾಗೂ ಬಿಜೆಪಿ ಮತ್ತು ಪಕ್ಷೇತರ ಶಾಸಕರು ಪಾಲ್ಗೊಂಡು ಸ್ವಾತಂತ್ರ್ಯ ಪೂರ್ವ ಹೋರಾಟ, ಸ್ವಾತಂತ್ರ್ಯಕ್ಕಾಗಿ ಬೇರೆ ಸಂಘಟನೆಗಳು ವ್ಯಕ್ತಿಗಳು ನಡೆಸಿದ್ದ ಹೋರಾಟ, ಕಾಂಗ್ರೆಸ್‌ನ ಹುಟ್ಟಿನ ಉದ್ದೇಶ, ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್ ಪಾತ್ರ, ಆರ್‌ಎಸ್‌ಎಸ್ ಪಾತ್ರ, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಶ್ರಮ, ಸಂವಿಧಾನ ರಚನೆಯಾದ ನಂತರ ಆಗಿರುವ ತಿದ್ದುಪಡಿಗಳು, ಇನ್ನೂ ಸಂವಿಧಾನದಲ್ಲಿರುವ ಗೊಂದಲಗಳು ಹಾಗೂ ಅನುಷ್ಠಾನದಲ್ಲಿನ ಲೋಪಗಳ ಕುರಿತಂತೆಯೂ ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು.



> ಸಂವಿಧಾನದ ಕುರಿತು ಒಳ್ಳೆಯ ಚರ್ಚೆಯಾಗಿತ್ತು. ನಾವೂ ಚರ್ಚೆಗೆ ಸಹಮತ ವ್ಯಕ್ತಪಡಿಸಿದ್ದೆವು. ಸದನದಲ್ಲಿ ಚರ್ಚೆಯಾಗಿರುವ ವಿಷಯವನ್ನು ಯಥಾವತ್ತಾಗಿ ಪುಸ್ತಕ ರೂಪದಲ್ಲಿ ಪ್ರಕಟಿಸುವುದಕ್ಕೆ ತೊಂದರೆಯಿಲ್ಲ. ನ್ಯಾಯಯುತವಾಗಿ ಯಾರು ಏನು ಮಾತನಾಡಿದ್ದಾರೆ, ಅದರ ವರದಿ ಸಂಸತ್ ಸಭಾಧ್ಯಕ್ಷರಿಗೂ ಕಳಿಸಿದರೆ ಅಡ್ಡಿಯಿಲ್ಲ.
>
> • ಎಚ್.ಕೆ. ಪಾಟೀಲ್, ಮಾಜಿ ಸಚಿವ